# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 248 | Pages. 2 | Date: 15-08-2025, FRIDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 248 - ಪುಟಗಳು : 2 15-08-2025 ಶುಕ್ರವಾರ Ph: 8762954248 ದರ : ₹1


# ರಾತ್ರಿ ಕಂಡ ಕನಸು ನಿಜವೆಂದು ಹೆದರಿಸಿದ ಬಾಲಕಿ

## ಅಪಹರಣಕ್ಕೆ ಯತ್ನ ಆರೋಪ | ಗಂಭೀರ ವಿಚಾರಣೆ ಬಳಿಕ ಪರಿಸ್ಥಿತಿ ತಿಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ರಾತ್ರಿ ಕಂಡ ಕನಸು ನಿಜವೆಂದು ಭಾವಿಸಿ ವಿದ್ಯಾರ್ಥಿನಿಯೊಬ್ಬಳು ಅದೇ ಭ್ರಮೆಯಲ್ಲಿ ತನ್ನ ಅಪಹರಣಕ್ಕೆ ಯತ್ನ ನಡೆದಿತ್ತು ಎಂದು ಶಿಕ್ಷಕರು ಹಾಗೂ ಪೊಲೀಸರನ್ನು ಒಂದು ಕ್ಷಣ ಪೇಚಿಗೆ ಸಿಲುಕಿಸಿದ ಘಟನೆ ಗುರುವಾರ ನಡೆದಿದೆ.

ತಾಲ್ಲೂಕಿನ ಹಂಚೂರು ಸರ್ಕಾರಿ ಪ್ರೌಢ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿಯೊಬ್ಬಳು ಶಾಲೆಗೆ ತೆರಳುತ್ತಿದ್ದಾಗ ಓಮಿನಿ ವಾಹನವೊಂದು ತನ್ನ ಬಳಿ ನಿಧಾನವಾಗಿ ಬಂದು ಅಪಹರಣಕ್ಕೆ ಯತ್ನಿಸಿದರೆಂದು ಹೇಳಿದಳು.

ಬೆಳಿಗ್ಗೆ ಶಾಲೆಗೆ ಬರುತ್ತಿದ್ದಾಗ ಲಗ್ಗೇಜ್ ತುಂಬಿದ ಓಮಿನಿಯೊಂದು ಹಿಂದಿನಿಂದ ಬಂದಿದೆ. ಹದಗೆಟ್ಟ ರಸ್ತೆ ಅದಾಗಿರುವುದರಿಂದ ವಿದ್ಯಾರ್ಥಿನಿ ಸಮೀಪ ಬಂದಾಗ ಚಾಲಕ ನಿಧಾನಕ್ಕೆ ಚಲಿಸಿದ್ದಾನೆ. ತನ್ನ ಅಪಹರಣಕ್ಕಾಗಿಯೇ ಬಂದರೆಂದು ಆತಂಕಗೊಂಡ ವಿದ್ಯಾರ್ಥಿನಿ ಬ್ಯಾಗ್ ಅನ್ನು ಪಕ್ಕದ ತೋಟಕ್ಕೆ ಎಸೆದು ಓಡಿಹೋಗಿದ್ದಾಳೆ. ರಸ್ತೆಯಲ್ಲಿ ಬರುತ್ತಿದ್ದ ಬೈಕ್ ಚಾಲಕ ಆಕೆಯನ್ನು ಕೂರಿಸಿಕೊಂಡು ಶಾಲೆಗೆ ಕರೆತಂದಿದ್ದಾರೆ.

ಭಾರೀ ಆತಂಕದಲ್ಲಿದ್ದ ಬಾಲಕಿ ತನ್ನನ್ನು ಅಪಹರಣಕ್ಕೆ ಯತ್ನಿಸಿದರು. ವಾಹನದಲ್ಲಿ ನಮ್ಮದೇ ಶಾಲೆಯ ಸಮವಸ್ತ್ರ ಧರಿಸಿದ ಇಬ್ಬರು ಹುಡುಗಿಯರಿದ್ದರು. ಒಬ್ಬ ವ್ಯಕ್ತಿ ನನ್ನನ್ನು ಹಿಡಿಯಲು ವಾಹನದಿಂದ ಇಳಿದುಬಂದ ಅವರಿಂದ ತಪ್ಪಿಸಿಕೊಂಡು ಬಂದೆ ಎಂದು ಶಿಕ್ಷಕರಿಗೆ ಅಳುತ್ತಲೇ ವರದಿ ಒಪ್ಪಿಸಿದ್ದಾಳೆ. ವಿದ್ಯಾರ್ಥಿಯ ಅಳಲನ್ನು ಆಲಿಸಿದ ಸ್ಥಳೀಯರು ಬಾಲಕಿಯ ಹೇಳಿಕೆಯನ್ನು ಮೊಬೈಲ್ ಕ್ಯಾಮರಾದಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟರು. ಮುಖ್ಯ ಶಿಕ್ಷಕ ನಾಗರಾಜು ಸಹ ವಿದ್ಯಾರ್ಥಿನಿಯ ಹೇಳಿಕೆಯನ್ನೇ ನಂಬಿ ವಿಡಿಯೋ ಹೇಳಿಕೆ ನೀಡಿದರು.

### ವಾಹನ ಹೋಗಿದ್ದು ನಿಜ

ಸುದ್ದಿ ತಿಳಿದು ಸ್ಥಳಕ್ಕಾಗಮಿಸಿದ ಆಲೂರು ಸರ್ಕಲ್ ಇನ್ಸ್ಪೆಕ್ಟರ್ ಮೋಹನ್ ರೆಡ್ಡಿ, ಬಿಇಒ ಕೃಷ್ಣೇಗೌಡ ವಿದ್ಯಾರ್ಥಿ ಹೇಳಿಕೆ ಆಧರಿಸಿ ಸಮೀಪದ ಮನೆಯೊಂದರ



ಸಿಸಿಟಿವಿ ಕ್ಯಾಮರಾ ಪರಿಶೀಲಿಸಿದಾಗ ಓಮಿನಿ ವಾಹನವೊಂದು ಚಲಿಸಿರುವುದು ತಿಳಿದಿದೆ. ಅದರ ನಂಬರ್‌ನ ಜಾಡು ಹಿಡಿದು ಪರಿಶೀಲನೆ ನಡೆಸಿದಾಗ ತಾಲ್ಲೂಕಿನ ಪಾಳ್ಯ ಹೋಬಳಿ ಕುಂಬಾರಹಳ್ಳಿ ಗ್ರಾಮದ ರವಿ ಎಂಬಾತ ಲಗ್ಗೇಜ್‌ನೊಂದಿಗೆ ರಸ್ತೆಯಲ್ಲಿ ತೆರಳಿರುವುದು ತಿಳಿದುಬಂದಿದೆ. ಬಳಿಕ ಬಾಲಕಿ ಪೋಷಕರನ್ನು ಕರೆಸಿ ವಿಷಯ ತಿಳಿಸಿದ್ದಾರೆ.

### ವಿದ್ಯಾರ್ಥಿನಿಗೆ ಭ್ರಮೆ

ಬಾಲಕಿ ಸಣ್ಣಪುಟ್ಟ ವಿಚಾರಗಳಿಗೆ ಹೆದರುವುದು, ಮನೆಯಲ್ಲಿ ಯಾರಾದರೂ ಜೋರಾಗಿ ಮಾತನಾಡಿದರೆ ಕಿರುಚುವುದು ಮಾಡುತ್ತಾಳೆ. ವಾಹನ ನಿಧಾನಕ್ಕೆ ಚಲಿಸಿದ್ದರಿಂದ ಭ್ರಮೆಯಲ್ಲಿ ಅಪಹರಣವೆಂದು ಬಿಂಬಿಸಿದ್ದಾಳೆ. ಹಲವು ವರ್ಷಗಳಿಂದ ಆಕೆಗೆ ಚಿಕಿತ್ಸೆ ನಡೆಯುತ್ತಿದ್ದು ಆ ವಿಚಾರ ಶಿಕ್ಷಕರಿಗೆ ತಿಳಿದಿರಲಿಲ್ಲ. ಪೋಷಕರೇ ಅದನ್ನು ದೃಢಪಡಿಸಿದ್ದರಿಂದ ಎಲ್ಲರೂ ನಿರಾಳರಾದರು. ಸ್ವಲ್ಪ ಸಮಯದ ಬಳಿಕ ಪೊಲೀಸರು ಆಕೆಯನ್ನು ಮತ್ತೆ ಪ್ರಶ್ನಿಸಿದಾಗ ರಾತ್ರಿ ಕನಸಿನಲ್ಲಿ ಅಪಹರಣವಾಗಿತ್ತು ಅದನ್ನೇ ನಿಜವೆಂದು ತಿಳಿದಿದ್ದೇ ಎಂಬ ಹೇಳಿಕೆ ನೀಡಿದ್ದಾಳೆ.

# ಹೆಂಡತಿಯನ್ನು ಮಚ್ಚಿನಿಂದ ಕೊಂದ ಪತಿ

ಸಕಲೇಶಪುರ: ತಾಲ್ಲೂಕಿನ ಸುಳ್ಳಕ್ಕಿ ಗ್ರಾಮದಲ್ಲಿ ಕೌಟುಂಬಿಕ ಕಲಹದಿಂದ ಶುರುವಾದ ಜಗಳದಲ್ಲಿ ಪತಿ ಮಚ್ಚಿನಿಂದ ಕೊಚ್ಚಿ ಹೆಂಡತಿಯನ್ನು ಕೊಲೆಗೈದು ತಾನೂ ಆತ್ಮಹತ್ಯೆಗೆ ಯತ್ನಿಸಿದ್ದಾನೆ.

ಗ್ರಾಮದ ಶಿವಮ್ಮ (60) ಮೃತರು. ಪತಿ ಸಿದ್ದಯ್ಯ ಕೊಲೆಗೈದ ಆರೋಪಿ. ಇಬ್ಬರೂ ಮದ್ಯವ್ಯಸನಿಗಳಾಗಿದ್ದರೆಂದು ಪುತ್ರಿ ಲೀಲಾ ಆರೋಪಿಸಿದ್ದಾರೆ.

ದಂಪತಿಗೆ ನಾಲ್ವರು ಮಕ್ಕಳಿದ್ದು ಎಲ್ಲರಿಗೂ ಮದುವೆಯಾಗಿದೆ. ಗುರುವಾರ ಮಧ್ಯಾಹ್ನ ಗಂಡ-ಹೆಂಡತಿ ಹಣಕಾಸಿನ ವಿಚಾರವಾಗಿ ಜಗಳ ಮಾಡಿಕೊಂಡಿದ್ದಾರೆ. ಸಿದ್ದಯ್ಯ ಸಿಟ್ಟಿನಲ್ಲಿ ಮಚ್ಚಿನಿಂದ ಹೆಂಡತಿಯನ್ನು ಕೊಚ್ಚಿ ಕೊಲೆಗೈದು ನಂತರ ತಾನು ಸಹ ಕುತ್ತಿಗೆಗೆ ಇರಿದುಕೊಂಡಿದ್ದಾನೆ.

ಈ ವೇಳೆ ಪುತ್ರ ಸೋಮಶೇಖರ್ ಕರೆ ಮಾಡಿದಾಗ ಸಿದ್ದಯ್ಯ ಜೋರಾಗಿ ಉಸಿರಾಡುತ್ತಿರುವುದು ಕೇಳಿಸಿದೆ. ತಕ್ಷಣವೇ ಲೀಲಾ ಹಾಗೂ ಆಕೆಯ ಪತಿ ಪ್ರಸಾದ್ ಮನೆಗೆ ಬಂದು ನೋಡಿದಾಗ ಒಳಗಿನಿಂದಲೇ ಬಾಗಿಲು ಹಾಕಲಾಗಿತ್ತು. ಬಾಗಿಲು ಮುರಿದು ನೋಡಿದಾಗ ಶಿವಮ್ಮ ರಕ್ತದ ಮಡುವಿನಲ್ಲಿ ಬಿದ್ದು ಅಲ್ಲೇ ಸಿದ್ದಯ್ಯ ಸಹ ಸಾವು ಬದುಕಿನ ನಡುವೆ ಹೋರಾಡುತ್ತಿದ್ದುದು ಕಂಡಿದೆ. ತಕ್ಷಣವೇ ಸಿದ್ದಯ್ಯರನ್ನು ಪಟ್ಟಣದ ಕ್ರಾಫರ್ಡ್ ಆಸ್ಪತ್ರೆಗೆ ದಾಖಲಿಸಿದ್ದಾರೆ.

# ಮಂಜರಾಬಾದ್ ಕೋಟೆ ಅಭಿವೃದ್ಧಿ: ಡಿಪಿಆರ್ ತಯಾರಿಸಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮಂಜರಾಬಾದ್ ಕೋಟೆ ಅಭಿವೃದ್ಧಿ ಸಂಬಂಧ ಅಧಿಕಾರಿಗಳು ಕ್ರಿಯಾ ಯೋಜನೆ ತಯಾರಿಸಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಗುರುವಾರ ಕೋಟೆಗೆ ಭೇಟಿ ನೀಡಿದ ಅವರು ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಕುಸಿದ ಕೋಟೆ ವೀಕ್ಷಿಸಿ ಸುದ್ದಿಗಾರರೊಂದಿಗೆ ಮಾತನಾಡಿ, ಸಂಸತ್ ಕಲಾಪ ಹಿನ್ನಲೆ ಭೇಟಿ ನೀಡಲು ಸಾಧ್ಯವಾಗಿರಲಿಲ್ಲ. ಬಿದ್ದಿರುವ ಗೋಡೆಯ ನಿರ್ಮಾಣ ಕಾಮಗಾರಿಯನ್ನು ಸೆಪ್ಟೆಂಬರ್‌ನಿಂದ ಪ್ರಾರಂಭಿಸಲಾಗುವುದು. ಹಂತ ಹಂತವಾಗಿ ಮಂಜರಾಬಾದ್ ಕೋಟೆ ಅಭಿವೃದ್ಧಿಪಡಿಸಲಾಗುವುದು. ಡಿಪಿಆರ್ ತಯಾರಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು. ನಕ್ಷತ್ರಾಕಾರದ ಕೋಟೆ ರಾಜ್ಯದ ಪ್ರಮುಖ ಪ್ರವಾಸಿ ಸ್ಥಳಗಳಲ್ಲಿ ಒಂದಾಗಿದೆ. ಕೇಂದ್ರ ಪ್ರವಾಸೋದ್ಯಮ ಸಚಿವರಿಗೆ ಸಮಸ್ಯೆ ಮನವರಿಕೆ ಮಾಡಲಾಗುವುದು. ರಾಜ್ಯ ಸರ್ಕಾರದೊಂದಿಗೆ ಸಹ ಚರ್ಚಿಸುತ್ತೇನೆ. ಸಂಸತ್ತಿನಲ್ಲಿ ಈ ವಿಷಯ ಪ್ರಸ್ತಾಪಿಸಿ ತುರ್ತು ಕ್ರಮ ಕೈಗೊಳ್ಳಲಾಗುವುದು. ಕೋಟೆಯನ್ನು ಪ್ರವಾಸೋದ್ಯಮ ಅಭಿವೃದ್ಧಿ ಪಟ್ಟಿಯಲ್ಲಿ ಸೇರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆಂದರು.

ಈ ಕೋಟೆಯನ್ನು ಪ್ರವಾಸಿಗರ 'ಹಾಟ್ ಸ್ಪಾಟ್' ಆಗಿ ಮಾಡುವ ಯೋಜನೆ ನನ್ನದಾಗಿದೆ. ಆದರೆ ಅದಕ್ಕೆ ಪ್ರತಿಯೊಂದು ಹಂತದಲ್ಲೂ ಪುರಾತತ್ವ ಇಲಾಖೆಯ ಅನುಮತಿ ಅಗತ್ಯವಾಗಿರುವುದರಿಂದ ಕೋಟೆಯನ್ನು ಮೊದಲ ನಕ್ಷೆಯ ರೂಪದಲ್ಲಿ ರೂಪಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಐತಿಹಾಸಿಕ ಕೋಟೆ ರಕ್ಷಣೆಗೆ ಸರ್ಕಾರ ಏಕೆ ನಿರ್ಲಕ್ಷ್ಯ ವಹಿಸಿದೆ ಎಂಬುದು ಗೊತ್ತಿಲ್ಲ. ಕೋಟೆಗೆ ಮೊದಲಿನ ಸೌಂದರ್ಯ ನೀಡಲು ಬೇಕಾದ ಕ್ರಮ ಕೈಗೊಳ್ಳಲಾಗುವುದು. ಟಿಪ್ಪು ಸುಲ್ತಾನ್ ನಿರ್ಮಿಸಿದ ಕೋಟೆಯನ್ನು ಭವಿಷ್ಯದ ಪೀಳಿಗೆಗೆ ಉಳಿಸಿಕೊಳ್ಳುವುದು ನಮ್ಮ ಜವಾಬ್ದಾರಿ ಎಂದರು.

# ಶ್ರವಣಬೆಳಗೊಳದಲ್ಲಿ ಹರ್ ಘರ್ ತಿರಂಗಾ ಜಾಥಾ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಜೈನಕಾಶಿ ಶ್ರವಣಬೆಳಗೊಳದ ವಿಂಧ್ಯಗಿರಿ ಬೆಟ್ಟದ ಮಹಾದ್ವಾರದಲ್ಲಿ ಪುರಾತತ್ವ ಇಲಾಖೆ ಹಾಗೂ ಅಂಬಿಕಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ವತಿಯಿಂದ ಗುರುವಾರ ಹರ್ ಘರ್ ತಿರಂಗಾ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು.

ವಿಂಧ್ಯಗಿರಿ ಮಹಾದ್ವಾರದಿಂದ ಜಾಥಾ ಪ್ರಾರಂಭವಾಗಿ ಶ್ರೀಮಠದ ಬೀದಿ, ಬೆಂಗಳೂರು ರಸ್ತೆ ಮೂಲಕ ಚಂದ್ರಗಿರಿ ಬೆಟ್ಟದ ಮಹಾದ್ವಾರದ ವರೆಗೆ ಸಾಗಿತು. ಎಲ್ಲರೂ ರಾಷ್ಟ್ರಧ್ವಜ ಹಿಡಿದು ವಂದೇ ಮಾತರಂ, ಭಾರತ ಮಾತಾ ಕೀ ಜಯ ಎಂಬ ಘೋಷಣೆಗಳನ್ನು ಕೂಗುತ್ತಾ ವಿದ್ಯಾರ್ಥಿಗಳು ಸಾಗಿದರು.

ಕೇಂದ್ರ ಪುರಾತತ್ವ ಇಲಾಖೆ ಹಾಸನ ಉಪ ವಿಭಾಗದ ಪುರಾತತ್ವ ಸಂರಕ್ಷಣಾಧಿಕಾರಿ ಸುನಿಲ್ ಕುಮಾರ್ ಮಾತನಾಡಿ, ಹರ್ ಘರ್ ತಿರಂಗಾ ಆಜಾದಿ ಕಾ ಅಮೃತ ಮಹೋತ್ಸವ ಅಂಗವಾಗಿ ನಡೆಸುವ ರಾಷ್ಟ್ರೀಯ ಹಬ್ಬ. ಈ ಅಭಿಯಾನದ ಉದ್ದೇಶ ದೇಶದ ಪ್ರತಿಯೊಂದು ಮನೆಯಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವ ಮೂಲಕ ರಾಷ್ಟ್ರಭಕ್ತಿಯನ್ನು ಹೆಚ್ಚಿಸಿ, ಧ್ವಜದ ಗೌರವವನ್ನು ಜನಮಾನಸದಲ್ಲಿ ಗಟ್ಟಿಗೊಳಿಸುವುದಾಗಿದೆ ಎಂದರು.

ರಾಷ್ಟ್ರೀಯ ಏಕತೆಯನ್ನು ಬಲಪಡಿಸಿ ವಿದ್ಯಾರ್ಥಿಗಳು ಹಾಗು ಯುವಕರಲ್ಲಿ ದೇಶಭಕ್ತಿಯನ್ನು ಹೆಚ್ಚಿಸುವುದರೊಂದಿಗೆ ನಾಡು-ನುಡಿಗೆ ಗೌರವ ನೀಡಿ ಪ್ರತಿ ನಾಗರಿಕನ ಮನಸ್ಸಿನಲ್ಲಿ ರಾಷ್ಟ್ರಭಕ್ತಿಯನ್ನು ಮತ್ತಷ್ಟು ಗಟ್ಟಿಗೊಳಿಸಲು ಸಹಕಾರಿಯಾಗುತ್ತದೆ ಎಂದರು.

ಅಂಬಿಕಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಕುಮಾರ್ ಅವರು, ಹರ್ ಘರ್ ತಿರಂಗಾ ಅಭಿಯಾನದ ಮಹತ್ವ ವಿವರಿಸಿದರು.

ಪುರಾತತ್ವ ಇಲಾಖೆ ಸಿಬ್ಬಂದಿ ಶ್ರೀನಿವಾಸ್, ಪ್ರಿಯಾಂಶು ದೀಕ್ಷಿತ್, ಸುರೇಂದ್ರ, ಮುರುಳಿ, ಜ್ಞಾನೇಶ್, ಪ್ರವಾಸಿ ಮಿತ್ರರಾದ ಮಣಿಕಂಠ, ಕೃಷ್ಣಮೂರ್ತಿ, ಅಮಿತ್, ರಾಜಣ್ಣ ಹಾಜರಿದ್ದರು.

# ದೇಶ ಸ್ವಾತಂತ್ರ್ಯ ಸಾಧಿಸಲು ಕ್ರಾಂತಿಕಾರಿಗಳ ಹೋರಾಟ ಕಾರಣ

## ಸಕಲೇಶಪುರದಲ್ಲಿ ಬೃಹತ್ ಪಂಜಿನ ಮೆರವಣಿಗೆ : ನೂರಾರು ದೇಶಾಭಿಮಾನಿಗಳು ಭಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ದೇಶಕ್ಕೆ ಬ್ರಿಟಿಷರಿಂದ ಸ್ವಾತಂತ್ರ್ಯ ತಂದುಕೊಡುವ ನಿಟ್ಟಿನಲ್ಲಿ ವೀರ ಸಾವರ್ಕರ್ ಅಂತಹ ಕ್ರಾಂತಿಕಾರಿಗಳ ಪಾತ್ರವು ದೊಡ್ಡದಾಗಿದೆ ಎಂದು ಹಿಂದು ಹಿತರಕ್ಷಣಾ ಸಮಿತಿ ರಾಜ್ಯ ಮುಖಂಡ ರಘು ಸಕಲೇಶಪುರ ಹೇಳಿದರು.

ಪಟ್ಟಣದಲ್ಲಿ ಹಿಂದು ಹಿತ ರಕ್ಷಣಾ ವೇದಿಕೆ ವತಿಯಿಂದ ಹಳೆಯ ಬಸ್ ನಿಲ್ದಾಣದಲ್ಲಿ ಆಯೋಜಿಸಿದ್ದ ಅಖಂಡ ಭಾರತ ಸಂಕಲ್ಪ ದಿನದಲ್ಲಿ ಮಾತನಾಡಿ, ಮುಖ್ಯ ಭಾಷಣಕಾರರಾಗಿ ಹಿಂದು ಮುಖಂಡ ಪುನೀತ್ ಕೆರೆಹಳ್ಳಿ ಬರಬೇಕಿತ್ತಾದರೂ ಕಾಂಗ್ರೆಸ್ ಸರ್ಕಾರದ ಷಡ್ಯಂತ್ರದಿಂದ ಬರಲು ಆಗಿಲ್ಲ. ಪುನೀತ್ ಕೆರೆಹಳ್ಳಿ ಅವರಿಗೆ ಜಿಲ್ಲಾಡಳಿತ ನಿರ್ಬಂಧ ಹೇರಿರುವುದು ಖಂಡನೀಯ ಎಂದರು.

1947ರ ಆ. 14ರ ಮಧ್ಯರಾತ್ರಿ ದೇಶಕ್ಕೆ ಸ್ವಾತಂತ್ರ್ಯ ದೊರಕಿತು. ಆದರೆ ದೇಶ ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ ಎಂದು ಮೂರು ತುಂಡಾಯಿತು. ಆಗಸ್ಟ್ 14ರ ಮಧ್ಯರಾತ್ರಿ ದೇಶದ ಲಕ್ಷಾಂತರ ಹಿಂದು ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಯಿತು. ಲಕ್ಷಾಂತರ ಹಿಂದುಗಳನ್ನು ಹತ್ಯೆ ಮಾಡಲಾಯಿತು.

ಆದರೆ ಇಂತಹ ಕರಾಳ ರಾತ್ರಿಯನ್ನು



ನಾವು ನೆನಪಿಸಿಕೊಳ್ಳುವ ಬದಲು ಪ್ರತಿವರ್ಷ ಆಗಸ್ಟ್ 15ರಂದು ಸಂಭ್ರಮಾಚರಣೆಯಲ್ಲಿ ಮುಳುಗುತ್ತೇವೆ. ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ದೇಶ ವಿಭಜನೆಯ ದುರಂತ ಕಥೆ ಹೇಳಬೇಕು ಎಂದರು.

ದೇಶಕ್ಕೆ ಸ್ವಾತಂತ್ರ್ಯವನ್ನು ಯಾರು ತಂದುಕೊಟ್ಟರು ಎಂದರೆ ಗಾಂಧೀಜಿ ಹಾಗೂ ನೆಹರು ಎಂದು ಹೇಳಲಾಗುತ್ತದೆ. ಆದರೆ ಇವರಿಬ್ಬರಿಗಿಂತ ಕ್ರಾಂತಿಕಾರರು ದೇಶಕ್ಕೆ ಸ್ವಾತಂತ್ರ್ಯ ತರಲು ಪ್ರಾಣವನ್ನೇ ಮುಡಿಪಾಗಿಟ್ಟಿದ್ದರು.

ಅದಕ್ಕಾಗಿ ಮಕ್ಕಳಿಗೆ ನಾವು ನೈಜ ಇತಿಹಾಸವನ್ನು ತಿಳಿಸಬೇಕು. ದೇಶ ವಿಭಜನೆಯಾದರೆ ದೇಶದಲ್ಲಿರುವ ಎಲ್ಲಾ ಮುಸ್ಲಿಂರು ಪಾಕಿಸ್ತಾನಕ್ಕೆ ಹೋಗಬೇಕು, ಅಲ್ಲಿರುವ ಎಲ್ಲಾ ಹಿಂದುಗಳು ಭಾರತಕ್ಕೆ ಬರಬೇಕು ಎಂದು ಸಂವಿಧಾನದ ಪಿತಾಮಹ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದರು. ಆದರೆ ಅಂಬೇಡ್ಕರ್ ಅವರ ಮಾತಿಗೆ ಬೆಲೆ ಕೊಡದೆ ಜಾತ್ಯಾತೀತ ದೇಶವನ್ನಾಗಿ ಮಾಡಲಾಗಿದೆ ಎಂದರು.

### ಧರ್ಮಸ್ಥಳ ಅಪಪ್ರಚಾರ ಸಲ್ಲದು

ಇಂದಿಗೂ ದೇಶದಲ್ಲಿ ಹಿಂದೂ ಧಾರ್ಮಿಕ ಕೇಂದ್ರಗಳು, ಹಿಂದುಗಳ ನಂಬಿಕೆಗಳ ವಿರುದ್ಧ ಅಪಪ್ರಚಾರ ನಡೆಯುತ್ತಿದೆ. ಧರ್ಮಸ್ಥಳ ಹಿಂದುಗಳ ಪವಿತ್ರ ಕ್ಷೇತ್ರವಾಗಿದ್ದು, ಆದರೂ ಸಹ ಅನಾಮಿಕನಿಗೆ ಮುಖವಾಡ ಹಾಕಿಸಿ ಎಸ್.ಐ.ಟಿ ತಂಡ ರಚಿಸಿ ತನಿಖೆ ನಡೆಯುತ್ತಿದೆ. ಕೂಡಲೆ ಈ ಅನಾಮಿಕನನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು ಹಾಗೂ ಧರ್ಮಸ್ಥಳ ವಿರುದ್ಧದ ಅಪಪ್ರಚಾರ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ದತ್ತಪೀಠಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಹೋಗುವವರು ಸಕಲೇಶಪುರದ ಕಾರ್ಯಕರ್ತರಾಗಿದ್ದಾರೆ.

ಸರ್ಕಾರಕ್ಕೆ ತಾಕತ್ತಿದ್ದರೆ ದತ್ತಪೀಠದಲ್ಲಿರುವ ಗೋರಿಗಳ ಉತ್ಖಾನವನ್ನು ಜಿಪಿಆರ್ ಹಾಗೂ ರಾಡರ್ ಮುಖಾಂತರ ಮಾಡಲಿ. ಕ್ಷೇತ್ರದ ಶಾಸಕರು ಗೆಲುವು ಸಾಧಿಸುವಲ್ಲಿ ಹಿಂದೂ ಕಾರ್ಯಕರ್ತರ ಶ್ರಮ ಹೆಚ್ಚಿದ್ದು, ಇದಕ್ಕೆ ತಕ್ಕಂತೆ ಕ್ಷೇತ್ರದ ಜನರಿಗೆ ಶಾಸಕರು ಕ್ಷೇತ್ರದ ಸಮಸ್ಯೆಗಳನ್ನು ಸದನದಲ್ಲಿ ಗಟ್ಟಿಧ್ವನಿಯಲ್ಲಿ ಹೊರಹಾಕುತ್ತಿದ್ದು, ಇದರಿಗಾಗಿ ಅವರು ಜನಸಾಮಾನ್ಯರ ಶಾಸಕರಾಗಿ ಹೊರಹೊಮ್ಮಿದ್ದಾರೆ. ಮುಂಬರುವ ರಾಮಧೂತ ಗಣಪತಿ ಉತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಬೇಕು ಎಂದು ಕೋರಿದರು.

ಹಿಂದು ಹಿತರಕ್ಷಣಾ ವೇದಿಕೆಯ ಮುಖಂಡ ಶಿವುಜೆಪ್ಪಿ ಮಾತನಾಡಿ, ಸಕಲೇಶಪುರದಲ್ಲಿ ಎಲ್ಲಾ ವರ್ಗದವರು ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದಾರೆ. ಸಂಘಟನೆ ವತಿಯಿಂದ ಗೋಹತ್ಯೆ ತಡೆಗೆ, ಲವ್ ಜಿಹಾದ್ ಹಾಗೂ ಮರಳು ಮಾಫಿಯಾ ತಡೆಗೆ ನಿರಂತರವಾಗಿ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು. ಪಟ್ಟಣದ ಆಂಜನೇಯಸ್ವಾಮಿ ದೇವಸ್ಥಾನದಿಂದ ಹಳೆ ಬಸ್ ನಿಲ್ದಾಣದವರೆಗೆ ಮಳೆಯ ನಡುವೆಯೇ ಬೃಹತ್ ಪಂಜಿನ ಮೆರವಣಿಗೆ ನಡೆಯಿತು.

ಹಿಂದು ಹಿತ ರಕ್ಷಣಾ ವೇದಿಕೆ ಮುಖಂಡರಾದ ಕೌಶಿಕ್ ಹೆನ್ನಲಿ, ಮಂಜು ಕಬ್ಬಿನಗದ್ದೆ, ದಿಲೀಪ್, ದುಷ್ಯಂತ್, ಧರ್ಮೇಶ್, ಶೇಖರ್ ಕಬ್ಬಿನಗದ್ದೆ, ಬಿಜೆಪಿ ತಾಲ್ಲೂಕು ಅಧ್ಯಕ್ಷ ವಳಲಹಳ್ಳಿ ಅಶ್ವಥ್, ಬಿಜೆಪಿ ಮುಖಂಡರಾದ ಪ್ರತಿಭಾ ಮಂಜುನಾಥ್, ಬಬಿತಾ ಅಶ್ವನಾಥ್ ಇತರರಿದ್ದರು.

# ಹೆಚ್.ಬಿ. ಮದನಗೌಡ ಕಸಾಪ ಗೌರವ ಕಾರ್ಯದರ್ಶಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿಯಾಗಿ ಹಿರಿಯ ಪತ್ರಕರ್ತ ಹೆಚ್.ಬಿ. ಮದನಗೌಡ ಅವರನ್ನು ನೇಮಕ ಮಾಡಿ ಕಸಾಪ ರಾಜ್ಯಾಧ್ಯಕ್ಷ ಡಾ. ಮಹೇಶ್ ಜೋಶಿ ಆದೇಶಿಸಿದ್ದಾರೆ.



ಹೆಚ್.ಬಿ. ಮದನಗೌಡ ಅವರು ಈ ಹಿಂದೆ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜಾನಪದ ಕಲೆ ರಕ್ಷಣೆ, ಕನ್ನಡ-ಕನ್ನಡಿಗ-ಕರ್ನಾಟಕದ ಹಿತ ರಕ್ಷಣೆ ಕಾಪಾಡುವ ಜವಾಬ್ದಾರಿಯನ್ನು ಕನ್ನಡ ಸಾಹಿತ್ಯ ಪರಿಷತ್ ಪರಿಷತ್ ಅನುಷ್ಠಾನಗೊಳಿಸುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಸಾಹಿತ್ಯಿಕ, ಸಾಂಸ್ಕೃತಿಕ ಚಿಂತಕ ಹೆಚ್.ಬಿ. ಮದನಗೌಡ ಅವರನ್ನು ಕಸಾಪ ಗೌರವ ಕಾರ್ಯದರ್ಶಿಯಾಗಿ ನಾಮನಿರ್ದೇಶನ ಮಾಡಲಾಗಿದೆ ಎಂದು ಡಾ. ಮಹೇಶ್ ಜೋಶಿ ತಿಳಿಸಿದ್ದಾರೆ.

# ನಾಮಫಲಕದಲ್ಲಿ ಕನ್ನಡ ಕಡ್ಡಾಯಕ್ಕೆ ಕರವೇ ಆಗ್ರಹ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**


ಚನ್ನರಾಯಪಟ್ಟಣ: ಅಂಗಡಿ ಮುಂಗಟ್ಟುಗಳಿಗೆ ಹಾಕುವ ನಾಮಫಲಕದಲ್ಲಿ ಶೇ. 60 ರಷ್ಟು ಕನ್ನಡ ಬಳಸಬೇಕೆಂಬ ನಿಯಮವಿದ್ದರೂ ಪಟ್ಟಣದಲ್ಲಿ ಅನುಷ್ಠಾನವಾಗಿಲ್ಲ. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳು ಪುರಸಭೆ ಮುಖ್ಯಾಧಿಕಾರಿಗೆ ಗುರುವಾರ ಮನವಿ ಸಲ್ಲಿಸಿದರು.

ವರ್ತಕರು ತಮ್ಮ ಅಂಗಡಿಗಳ ನಾಮಫಲಕಗಳಲ್ಲಿ ಶೇ. 60ರಷ್ಟು ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕೆಂದು ಸರ್ಕಾರವು ಅಧಿಸೂಚನೆ ಹೊರಡಿಸಿದೆ. ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವ ನಾಮಫಲಕಗಳಲ್ಲಿ ಶೇ. 60 ಕನ್ನಡ, ಶೇ. 40ರಷ್ಟು ಆಂಗ್ಲಭಾಷೆ ಸೇರಿ ಇನ್ನಿತರ ಭಾಷೆಗಳ ಬಳಸುವಂತೆ ಸ್ಪಷ್ಟ ನಿರ್ದಶನ ನೀಡಿದೆ.

ಈ ನಿಯಮವನ್ನು ಯಾರೂ ಪಾಲಿಸುತ್ತಿಲ್ಲ. ಅಂತಹ ಅಂಗಡಿಗಳಿಗೆ ನೋಟೀಸ್ ಕೊಡುವ ಮೂಲಕ ಎಚ್ಚರಿಕೆ ನೀಡಬೇಕೆಂದು ಕರವೇ ಪದಾಧಿಕಾರಿಗಳು ಆಗ್ರಹಿಸಿದರು. ಈ ಕಾನೂನು ಜಾರಿಯಾಗದಿದ್ದರೆ ನಾಮಫಲಕಗಳಿಗೆ ಮಸಿ ಬಳಿದು ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಕೆ ನೀಡಿದರು.

# ಕ್ಯಾಥ್‌ಲ್ಯಾಬ್‌ಗೆ 9 ಕೋಟಿ ರೂ. ಇಲ್ಲವೇ: ಎ. ಮಂಜು ಪ್ರಶ್ನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರದಲ್ಲಿ ಕ್ಯಾಥ್ ಲ್ಯಾಬ್ ನಿರ್ಮಾಣಕ್ಕೆ 9.24 ಕೋಟಿ ರೂ. ಕೊಡಲು ಸರ್ಕಾರದ ಬಳಿ ಹಣ ಇಲ್ಲವೇ ಎಂದು ಶಾಸಕ ಎ. ಮಂಜು ಸರ್ಕಾರಕ್ಕೆ ಪ್ರಶ್ನಿಸಿದರು.

ವಿಧಾನಸಭೆ ಅಧಿವೇಶನದಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕ್ಯಾಥ್ ಲ್ಯಾಬ್‌ನ ಅವಶ್ಯಕತೆ ಹೆಚ್ಚಿದ್ದು ಅದಕ್ಕಾಗಿ ಕೇವಲ 9.24 ಕೋಟಿ ರೂ. ಅನುದಾನ ನೀಡಲು ನಿರ್ಲಕ್ಷ್ಯ ವಹಿಸುತ್ತಿರುವುದು ಏಕೆ ಎಂದು ಖಾರವಾಗಿ ಪ್ರಶ್ನಿಸಿದರು.

ಜಿಲ್ಲೆಯಲ್ಲಿ ಹೃದಯಾಘಾತದಿಂದ ಸಾಕಷ್ಟು ಪ್ರಾಣ ಹಾನಿ ಸಂಭವಿಸಿದೆ. ಸರ್ಕಾರವೂ ಜಯದೇವ ಆಸ್ಪತ್ರೆಯ ಡಾ. ರವೀಂದ್ರನಾಥ್ ನೇತೃತ್ವದಲ್ಲಿ ಸಮಿತಿ ರಚಿಸಿ ವರದಿ ಪಡೆದಿದೆ. 30 ರಿಂದ 40 ವರ್ಷದ ಒಳಗಿನವರೇ ಹೆಚ್ಚು ಸಾವಿಗೀಡಾಗಿದ್ದಾರೆ. ಹಠಾತ್ ಸಾವಿನಿಂದ ಎಷ್ಟೋ ಕುಟುಂಬಗಳು ಚಿಂತಾಕ್ರಾಂತವಾಗಿವೆ. ಜಿಲ್ಲೆಯಲ್ಲಿ ಈಗಲೂ ಭಯದ ವಾತಾವರಣ ಇದೆ ಎಂದರು.

ತುರ್ತಾಗಿ ಕ್ಯಾಥ್ ಲ್ಯಾಬ್ ನಿರ್ಮಾಣಕ್ಕೆ 9.24 ಕೋಟಿ ರೂ. ನೀಡುವಂತೆ ಜೆಡಿಎಸ್ ಶಾಸಕರು ಜಂಟಿಯಾಗಿ ಮನವಿ ಸಲ್ಲಿಸಿದ್ದೆವು. ಆದರೆ ಸರ್ಕಾರ ಲಭ್ಯತೆ ಆಧಾರದ ಮೇಲೆ ಅನುದಾನ ಒದಗಿಸಲಾಗುವುದು ಎಂದಿದೆ. ಕೇವಲ 9 ಕೋಟಿ ರೂ. ಹಣ ನೀಡಲು ನಿರ್ಲಕ್ಷ್ಯ ವಹಿಸುತ್ತಿರುವುದು ಏಕೆ. ಜನರ ಪ್ರಾಣ ರಕ್ಷಣೆ ಸರ್ಕಾರದ ಹೊಣೆಯಲ್ಲವೇ. ಇದು ಭರಿಸಲು ಸಾಧ್ಯವಾಗದಂತಹ ದೊಡ್ಡ ಮೊತ್ತವೇನಲ್ಲ. ತುರ್ತಾಗಿ ಕ್ಯಾಥ್‌ಲ್ಯಾಬ್ ನಿರ್ಮಿಸಿಕೊಡಬೇಕೆಂದು ಮನವಿ ಮಾಡಿದರು.

# ಧರ್ಮಸ್ಥಳ ಸಂಸ್ಥೆಯಿಂದ ಸ್ವಚ್ಛತಾ ಕಾರ್ಯ

ಅರಕಲಗೂಡು: ತಾಲ್ಲೂಕಿನ ಬೈಚನಹಳ್ಳಿ ವಲಯ ವ್ಯಾಪ್ತಿಯ 10 ಗ್ರಾಮಗಳಲ್ಲಿನ ಶ್ರದ್ಧಾ ಕೇಂದ್ರಗಳ ಸ್ವಚ್ಛತಾ ಕಾರ್ಯಕ್ರಮವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಸ್ಥಳೀಯ ಗ್ರಾಮಸ್ಥರು ಸಹಕಾರದೊಂದಿಗೆ ಕೈಗೊಳ್ಳಲಾಯಿತು.



ಯೋಜನಾಧಿಕಾರಿ ಪ್ರಕಾಶ್ ಮೊಗವಿರ್ ಮಾತನಾಡಿ, ಗ್ರಾಮಗಳಲ್ಲಿನ ಶ್ರದ್ಧಾ ಕೇಂದ್ರಗಳ ಒಳಗೆ ಮತ್ತು ಹೊರಗೆ ಶುಚಿತ್ವವನ್ನು ಸ್ವಯಂ ಪ್ರೇರಿತವಾಗಿ ಭಕ್ತರು ಕೈಗೊಳ್ಳಬೇಕಿದೆ. ಅದರಿಂದ ದೇವಮಂದಿರದ ಪಾವಿತ್ರ್ಯತೆ ಹೆಚ್ಚುತ್ತದೆ. ಆರೋಗ್ಯವಂತ ಸಮಾಜಕ್ಕೆ ಸ್ವಚ್ಛ ಪರಿಸರ ಎಷ್ಟು ಮುಖ್ಯವೋ ಅದೇ ರೀತಿ ಊರುಗಳ ದೇವಾಲಯಗಳು ಅಷ್ಟೇ ಪ್ರಮುಖವಾಗಿವೆ. ವಾರಕ್ಕೆ ಒಮ್ಮೆಯಾದರೂ ದೇವಾಲಯ ಆವರಣವನ್ನು ಸ್ವಚ್ಛಗೊಳಿಸಿಕೊಳ್ಳೋಣ ಎಂದು ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಕ್ಷೇತ್ರವೂ ಧಾರ್ಮಿಕ ಕಾರ್ಯಗಳ ಜೊತೆಯಲ್ಲಿಯೇ ಸಾಮಾಜಿಕ, ಆರ್ಥಿಕ ಸಬಲೀಕರಣ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ಶ್ರದ್ಧಾ ಕೇಂದ್ರಗಳ ಸ್ವಚ್ಛತೆಯಿಂದ ಆಗುವ ಪ್ರಯೋಜನಗಳ ಹಾಗೂ ಯೋಜನೆಯಿಂದ ಸಿಗುವ ಅನುದಾನಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ವಲಯ ಮೇಲ್ವಿಚಾರಕಿ ಶೀಲಾ, ಒಕ್ಕೂಟದ ಅಧ್ಯಕ್ಷ ಸಿದ್ದಲಿಂಗಪ್ಪ. ಉಪಾಧ್ಯಕ್ಷ ಕಾಂತರಾಜ್, ಸೇವಾ ಪ್ರತಿನಿಧಿ ರೂಪ, ಪ್ರಗತಿಬಂಧು ಸಂಘದ ಸದಸ್ಯರು ಮತ್ತಿತರರಿದ್ದರು.

# ಜಮೀನಿನಲ್ಲಿ ವಿದ್ಯುತ್ ತುಳಿದು ವ್ಯಕ್ತಿ ಸಾವು

ಬೇಲೂರು: ತಾಲ್ಲೂಕಿನ ಪಂಡಿತನಹಳ್ಳಿ ಗ್ರಾಮದಲ್ಲಿ ಜಮೀನಿನಲ್ಲಿ ಹುಲ್ಲು ಕುಯ್ಯುತ್ತಿದ್ದಾಗ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ವ್ಯಕ್ತಿ ಮೃತಪಟ್ಟಿದ್ದಾರೆ. ಗ್ರಾಮದ ಕಲ್ಲುವೀರೇಗೌಡ ಮೃತರು. ಕಿವುಡ ಹಾಗೂ ಮಂದ ಬುದ್ಧಿಯವರಾಗಿದ್ದ ಅವರು ಸಹೋದರರ ಜೊತೆಗಿದ್ದರು. ಬುಧವಾರ ಬೆಳಿಗ್ಗೆ 9 ಗಂಟೆಗೆ ಸಹೋದರ ಧರ್ಮಪ್ಪ ಹಾಗೂ ಭರತ್ ಹಸುವಿಗೆ ಹುಲ್ಲು ಕುಯ್ದುಕೊಂಡು ಬರಲು ಕಳುಹಿಸಿದ್ದರು. ಸಾಕು ನಾಯಿಯೊಂದಿಗೆ ಜಮೀನಿಗೆ ತೆರಳಿದ್ದ ಕಲ್ಲುವೀರೇಗೌಡ ಎಷ್ಟೇ ಹೊತ್ತಾದರೂ ವಾಪಸ್ ಬಾರದೆ ಇದ್ದಾಗ ಸ್ಥಳಕ್ಕೆ ತೆರಳಿದಾಗ ವಿದ್ಯುತ್ ತಗುಲಿ ಮೃತಪಟ್ಟಿರುವುದು ಗೊತ್ತಾಗಿದೆ.

# ಮಲ್ಲಿಪಟ್ಟಣದಲ್ಲಿ ಆರೋಗ್ಯ ತಪಾಸಣಾ ಶಿಬಿರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಸಾರ್ವಜನಿಕರು ವೈಯಕ್ತಿಕ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಏನಾದರೂ ಸಂಶಯಗಳಿದ್ದರೆ ಸರ್ಕಾರದ ಹೆಲ್ಪ್‌ಲೈನ್ 1097 ನಂಬರಿಗೆ ಕರೆ ಮಾಡಿ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ ಎಂದು ಸಾರ್ವಜನಿಕ ಆಸ್ಪತ್ರೆ ಆಪ್ತಸಮಾಲೋಚಕ ಪರಶುರಾಮ ಶಿರೂರ ತಿಳಿಸಿದರು.



ತಾಲ್ಲೂಕಿನ ಮಲ್ಲಿಪಟ್ಟಣ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲ್ಲೂಕು ಆರೋಗ್ಯ ಇಲಾಖೆ, ಸಾರ್ವಜನಿಕ ಆಸ್ಪತ್ರೆಯ ಐಸಿಟಿಸಿ ವಿಭಾಗ ಮತ್ತು ಗ್ರಾಮ ಪಂಚಾಯತಿ ಮಲ್ಲಿಪಟ್ಟಣ ಹಾಗೂ ಚೈತನ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಸಹಯೋಗದಲ್ಲಿ ಮಲ್ಲಿಪಟ್ಟಣ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಕುರಿತು ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಲಿಂಗ-ಕಾಮ ಲೈಂಗಿಕ ಕ್ರಿಯೆ ಹೆಚ್ಚು ಕಂಡುಬರುತ್ತಿರುವುದರಿಂದ ಅವಿವಾಹಿತ ಯುವಕರಲ್ಲಿ ಎಚ್‌ಐವಿ ಖಚಿತ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತಿರುವುದು ನೋವಿನ ಸಂಗತಿ.

ಆದ್ದರಿಂದ ರಾಜ್ಯದಲ್ಲಿ ಹಾಸನ ಜಿಲ್ಲೆ ಹೆಚ್‌ಐವಿ ಸೋಂಕಿತರಲ್ಲಿ 13ನೇ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ಒಟ್ಟು 12 ಸಾವಿರಕ್ಕಿಂತ ಹೆಚ್ಚು ಜನರು ಹೆಚ್‌ಐವಿ ಸೋಂಕಿತರಿದ್ದಾರೆ.

ತಾಲ್ಲೂಕಿನಲ್ಲಿ 350 ಹೆಚ್ಚು ಜನರು ಸೋಂಕಿತರಿದ್ದು ಹೆಚ್‌ಐವಿ ಕಾಯಿಲೆಗೆ ಸಂಬಂಧಪಟ್ಟಂತೆ ಮಾತ್ರೆಗಳನ್ನು ಕುಡಿಯುತ್ತಿದ್ದಾರೆ. ಆದ್ದರಿಂದ ಈ ರೀತಿಯ ತಪಾಸಣಾ ಶಿಬಿರಗಳ ಮೂಲಕ ಪ್ರತಿಯೊಂದು ಗ್ರಾಮಗಳಲ್ಲಿ ಎಚ್‌ಐವಿ ಕ್ಷಯ ರೋಗ ಸಿಫಿಲಿಸ್ ಹೆಪಟೈಟಿಸ್ ಡೆಂಗ್ಯೂ ಕಾಯಿಲೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಶಿಬಿರದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ಆಸ್ಪತ್ರೆಯ ಮತ್ತೋರ್ವ ಆಪ್ತಸಮಾಲೋಚಕ ಉಮೇಶ ಅವರು ಅಸಾಂಕ್ರಾಮಿಕ ರೋಗಗಳಾದ ಅಧಿಕ ರಕ್ತದ ಒತ್ತಡ ಹಾಗೂ ಮಧುಮೇಹ ಕಾಯಿಲೆಗಳನ್ನು ಪತ್ತೆ ಮಾಡುವುದು ಕಾಯಿಲೆ ಬಂದರೆ ಜೀವನ ಶೈಲಿಯನ್ನು ಮತ್ತು ಊಟದ ವಿಧಾನಗಳನ್ನು ಬದಲಾಯಿಕೊಳ್ಳಬೇಕು ಅದರಿಂದ ಆಗುವಂತ ದುಷ್ಪರಿಣಾಮಗಳನ್ನು ಮುನ್ನೆಚರಿಕಾ ಕ್ರಮಗಳನ್ನು ಕುರಿತು ಮಾಹಿತಿ ನೀಡಿದರು.

ಶಿಬಿರದಲ್ಲಿ ಸುಮಾರು 75 ಕ್ಕೂ ಹೆಚ್ಚು ಜನರು ಭಾಗಿಯಾಗಿ ಮಧುಮೇಹ ಅಧಿಕ ರಕ್ತದ ಒತ್ತಡ, ಹೆಚ್‌ಐವಿ ಹಾಗೂ ಕ್ಷಯ ರೋಗ ಪರೀಕ್ಷೆಯನ್ನು ಮಾಡಿಸಿಕೊಂಡರು.

ಐಸಿಟಿಸಿ ಪ್ರಯೋಗಶಾಲಾ ತಂತ್ರಜ್ಞರಾದ ಗೌರಮ್ಮ ಹಾಗೂ ಎನ್‌ಸಿಡಿ ವಿಭಾಗದ ವೈದ್ಯಾಧಿಕಾರಿ ಡಾ. ಪ್ರೀತಮ್ ಹಾಗೂ ಶುಶ್ರೂಷಕಿ ಲಲಿತಾ ಚೈತನ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ತಾಲೂಕು ಕ್ಷೇತ್ರಕಾರ್ಯಕರ್ತ ಚಂದ್ರಶೇಖರ್, ಮಲ್ಲಿಪಟ್ಟಣ ಗ್ರಾಪಂ ಅಧಿಕಾರಿ, ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತರು ಆಶಾ ಕಾರ್ಯಕರ್ತೆಯರು ಇತರರು ಶಿಬಿರದಲ್ಲಿ ಭಾಗವಹಿಸಿದ್ದರು.

# ವೇತನ ಇಲ್ಲದೆ ನೀರುಗಂಟಿಗಳ ಪರದಾಟ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ತಾಲ್ಲೂಕಿನ ಐಚನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೀರುಗಂಟಿ ಸಿಬ್ಬಂದಿಗೆ ಕಳೆದ 8 ತಿಂಗಳಿಂದ ಸಂಬಳ ನೀಡಿಲ್ಲವೆಂದು ಆರೋಪಿಸಿ ಸಿಬ್ಬಂದಿ ತಾಲ್ಲೂಕು ಪಂಚಾಯಿತಿ ಅಧಿಕಾರಿಗೆ ಮನವಿ ಸಲ್ಲಿಸಿದರು.

ಕಂದಾಯ ವಸೂಲಿ ಮಾಡಿ ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹೇಳುತ್ತಾರೆ. ಆದರೆ ಪ್ರಾಮಾಣಿಕವಾಗಿ ಕರ ವಸೂಲಿಗೆ ತೆರಳಿದಾಗ ಗ್ರಾಮೀಣರು ಸಬೂಬು ಹೇಳುತ್ತಾರೆ. ಅಷ್ಟ ಇಷ್ಟ ವಸೂಲಿ ಮಾಡಿಕೊಡಲಾಗಿದೆ. ಆದರೆ ಅದನ್ನೂ ಸಹ ಗ್ರಾಪಂ ಇತರೆ ಕೆಲಸಗಳಿಗೆ ವಿನಿಯೋಗಿಸಿ ನಮ್ಮನ್ನು ಬರಿಗೈಯಲ್ಲಿ ದುಡಿಸುತ್ತಿದ್ದಾರೆ. ಈ ಬಗ್ಗೆ ತಾಪಂ ಇಒ ಮುನಿರಾಜು ಅವರಿಗೆ ಮನವಿ ಕೊಡಲು ಬಂದರೆ ಅವರು ಸಹ ನೀವು ಕರ ವಸೂಲಿ ಮಾಡಿದರಷ್ಟೆ ಸಂಬಳ ಎನ್ನುತ್ತಾರೆ. ಸಂಬಳ ಕೊಡಲಿ, ಇಲ್ಲದಿದ್ದರೂ, ನೀರು ಸರಬರಾಜು ಮತ್ತಿತರೆ ಕೆಲಸ ನಿರ್ವಹಿಸುತ್ತಿದ್ದೇವೆ. ಈ ಬಗ್ಗೆ ಗ್ರಾಮಗಳಲ್ಲಿ ಯಾವುದೇ ನಮ್ಮ ಕೆಲಸ ನಿರ್ವಹಣೆಯ ಬಗ್ಗೆ ಆಕ್ಷೇಪ, ದೂರು ಇಲ್ಲ. ಕರ ವಸೂಲಿ ಮಾನದಂಡ ಅನುಸರಿಸಿರುವುದು ಸರಿಯಲ್ಲ. ಅದರಿಂದ ಅಧಿಕಾರಿಗಳು ಮತ್ತು ಗ್ರಾಮೀಣರು ಎರಡೂ ಕಡೆಯಿಂದ ನಾವು ಉಪದ್ರವ ಅನುಭವಿಸಬೇಕಿದೆ. ನಮ್ಮ ಜೀವನಕ್ಕೆ ಕನಿಷ್ಟ ವೇತನ ಸರ್ಕಾರ ನಿಗದಿ ಪಡಿಸಿದೆ. ಆದರೆ ಕರ ವಸೂಲಿಯಾದರೆ ಮಾತ್ರ ಸಂಬಳ ಎನ್ನುವುದಾದರೆ ಗ್ರಾಮಗಳಲ್ಲಿ ಇರುವ ಪರಿಸ್ಥಿತಿಯನ್ನು ಅಧಿಕಾರಿಗಳೇ ಪರಾಮರ್ಶಿಸಬೇಕು ಎಂದು ಆಗ್ರಹಿಸಿದರು.



ನೀರುಗಂಟಿಗಳಾದ ತಮ್ಮಯ್ಯ, ರವಿ, ಸುನಿಲ್, ರಮೇಶ್, ಸತೀಶ್, ಚಂದ್ರಯ್ಯ, ರಾಮಚಂದ್ರ ಹಾಗೂ ನವೀನ್ ಹಾಜರಿದ್ದರು.

ತಾಪಂ ಕಾರ್ಯನಿರ್ವಹಣಾಧಿಕಾರಿ ಮುನಿರಾಜು ಮಾತನಾಡಿ, ಸರ್ಕಾರದ ನಿಯಮ ಇರುವುದೇ ಹಾಗೆ. ಕರ ವಸೂಲಿ ನಡೆಸಿದರೆ ಅದರಲ್ಲಿ ಅವರ ಸಂಬಳ ನೀಡಬಹುದು. ತಾಲ್ಲೂಕಿನ 26 ಗ್ರಾಪಂಗಳಲ್ಲಿ ಐಚನಹಳ್ಳಿ ಗ್ರಾಪಂ ಮಾತ್ರವೇ ಕರವಸೂಲಿಯಲ್ಲಿ ಹಿಂದುಳಿದಿದೆ. ಅದರಿಂದ ನೋಟಿಸ್ ನೀಡಿದ್ದೇನೆ. ಇಲಾಖೆಯ ನಿಯಮ ಅನುಸರಿಸಿ ಕ್ರಮ ಕೈಗೊಳ್ಳಲಾಗಿದೆ ಎಂದರು.

# ತೆಂಗಿಗೆ ತಗುಲಿರುವ ರೋಗಬಾಧೆ ನಿಯಂತ್ರಣಕ್ಕೆ ಔಷಧ ಸಿಂಪಡಿಸಿ

ಬೇಲೂರು: ಇತ್ತೀಚಿನ ದಿನಗಳಲ್ಲಿ ತೆಂಗು ಬೆಳೆಗೆ ಹಲವಾರು ಕೀಟ ಮತ್ತು ರೋಗ ಕಾಣಿಸಿ ಕೊಂಡಿದ್ದು ನಿರ್ಮೂಲನೆಗಾಗಿ ತೋಟಗಾರಿಕಾ ಇಲಾಖೆಯಿಂದ ಉಚಿತವಾಗಿ ನೀಡುತ್ತಿರುವ ಔಷಧಗಳನ್ನು ಬಳಸಿಕೊಂಡು ಬೆಳೆಗಳ ರಕ್ಷಣೆಯೊಂದಿಗೆ ರೈತರು ಆರ್ಥಿಕವಾಗಿ ಸಬಲರಾಗಬೇಕು ಎಂದು ಶಾಸಕ ಎಚ್.ಕೆ. ಸುರೇಶ್ ಹೇಳಿದರು.



ತಾಲ್ಲೂಕಿನ ಘಟ್ಟದಹಳ್ಳಿ ಗ್ರಾಮದಲ್ಲಿ ತೋಟಗಾರಿಕಾ ಇಲಾಖೆಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರೋಗ ಮತ್ತು ಪೋಷಕಾಂಶಗಳ ನಿರ್ವಹಣೆಗಾಗಿ ಸಸ್ಯ ಸಂರಕ್ಷಣಾ ಔಷಧಿಗಳಾದ ಬೇವಿನ ಹಿಂಡಿ, ಹಸಿರೆಲೆ ಗೊಬ್ಬ ಬೀಜ, ಬೇವಿನ ಎಣ್ಣೆ ಹಾಗೂ ಲಘು ಪೋಷಕಾಂಶ' ವಿತರಿಸಿ ಮಾತನಾಡಿ, ಕೆಲ ಸಮಯ ಅತಿವೃಷ್ಟಿ ಮತ್ತೊಮ್ಮೆ ಅನಾವೃಷ್ಟಿಯಿಂದ ತತ್ತರಿಸಿರುವ ರೈತರಿಗೆ ಈಗ ತೆಂಗು ಬೆಳೆಗೆ ವಿವಿಧ ಕೀಟ ಮತ್ತು ರೋಗ ಕಾಣಿಸಿಕೊಂಡು ಇಳುವರಿಯಲ್ಲಿ ವ್ಯತ್ಯಾಸವಾಗುವುದರಿಂದ ರೈತರಿಗೆ ಆರ್ಥಿಕವಾಗಿ ನಷ್ಟವಾಗುತ್ತದೆ. ಆದ್ದರಿಂದ ಮುಂಜಾಗೃತಾ ಕ್ರಮವಾಗಿ ತೋಟಗಾರಿಕಾ ಇಲಾಖೆ ಅಧಿಕಾರಿಗಳು ಎಚ್ಚೆತ್ತು ತೆಂಗು ಬೆಳೆ ಸಂರಕ್ಷಣೆಗೆ ಮುಂದಾಗಬೇಕು. ಜೊತೆಗೆ ಗಿಡಗಳನ್ನು ರಕ್ಷಿಸಲು ಅಗತ್ಯವಾಗಿ ಬೇಕಾದ ಬೇವಿನ ಹಿಂಡಿ, ಹಸಿರೆಲೆ ಗೊಬ್ಬ ಬೀಜ, ಬೇವಿನ ಎಣ್ಣೆ ಹಾಗೂ ಲಘು ಪೋಷಕಾಂಶಗಳನ್ನು ವಿತರಿಸುತ್ತಿದ್ದು, ಅವುಗಳನ್ನು ಬಳಸಿಕೊಂಡು ಗಿಡಗಳ ರಕ್ಷಣೆಯೊಂದಿಗೆ ರೈತರು ಆರ್ಥಿಕವಾಗಿ ಮುಂದೆ ಬರಬೇಕು ಎಂದರು. ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಎಚ್.ಆರ್. ಯೋಗೀಶ್ ಮಾತನಾಡಿ, ರೈತರು ತೆಂಗು ಬೆಳೆಗೆ ಕೀಟ ಮತ್ತು ರೋಗಬಾಧೆ ಹತೋಟಿ ಮಾಡಲೆಂದು ಇಲಾಖೆಯಿಂದ ವಿವಿಧ ಔಷಧಗಳನ್ನು ವಿತರಿಸಲಾಗುತ್ತಿದೆ. ಇದನ್ನು ಸದೂಪಯೋಗ ಪಡಿಸಿಕೊಂಡು ಕೀಟ ಹಾಗೂ ರೋಗಬಾಧೆ ನಿವಾರಿಸಿ ಇಳುವರಿ ಪಡೆಯಬೇಕು ಎಂದು ಹೇಳಿದರು.

ಘಟ್ಟದಹಳ್ಳಿ ಗ್ರಾಪಂ ಅಧ್ಯಕ್ಷ ವಿಶ್ವನಾಥ್, ಉಪಾಧ್ಯಕ್ಷ ನವೀನ್, ಸದಸ್ಯರಾದ ಶಶಿಧರ್, ಮೀನಾಕ್ಷಮ್ಮ, ಭೋಜರಾಜ್, ಭವ್ಯ, ರಮೇಶ್, ತೋಟಗಾರಿಕಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಕೆ.ಬಿ. ಸತೀಶ್, ಅಧಿಕಾರಿಗಳಾದ ವಿನಯ್ ಶೆಟ್ಟಿ, ರಂಗಸ್ವಾಮಿ, ಕಿಶೋರ್ ಹಾಗೂ ಇತರರಿದ್ದರು.

# ಸಾಲು ಮರದ ತಿಮ್ಮಕ್ಕ ನೆಟ್ಟ ಗಿಡಗಳು ನೆಲಸಮ: ಆರೋಪ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ತಾಲ್ಲೂಕು ಕಚೇರಿ ಆವರಣದಲ್ಲಿ ಕೆಲ ವರ್ಷಗಳ ಹಿಂದೆ ಸಾಲು ಮರದ ತಿಮ್ಮಕ್ಕ ನೆಟ್ಟಿದ್ದ ಗಿಡಗಳನ್ನು ಕಿತ್ತು ಹಾಕಲಾಗಿದೆ ಎಂದು ಸಾಲ ಮರದ ತಿಮ್ಮಕ್ಕ ಫೌಂಡೇಷನ್ ಅಧ್ಯಕ್ಷ ಬಳ್ಳೂರು ಉಮೇಶ್ ಆರೋಪಿಸಿದರು.

ಸಾಲು ಮರದ ತಿಮ್ಮಕ್ಕ ತಾಲ್ಲೂಕು ಕಚೇರಿ ಆವರಣದಲ್ಲಿ ನೆರಳೆ ಸೇರಿ ಸಾಕಷ್ಟು ಗಿಡಗಳನ್ನು ನೆಟ್ಟಿದ್ದರು. ಅವುಗಳಲ್ಲಿ ಸಾಕಷ್ಟು ಮರಗಳಾಗಿವೆ. ಕೆಲ ಗಿಡಗಳು ಬೆಳೆಯದಿಂದ ಕಾರಣ ಎರಡು ವರ್ಷಗಳ ಹಿಂದೆ ಗಿಡಗಳನ್ನು ನೆಟ್ಟಿದ್ದರು. ಇಂದು ಗಿಡಗಳನ್ನು ಕಿತ್ತು ಹಾಕಿರುವ ಮಾಹಿತಿ ಬಂದಾಗ ಇಲ್ಲಿ ಬಂದು ನೋಡಿದಾಗ ಗಿಡಗಳನ್ನು ಕಿತ್ತು ರಾಶಿ ಹಾಕಲಾಗಿತ್ತು. ತಹಶೀಲ್ದಾರ್ ಅವರನ್ನು ಈ ಬಗ್ಗೆ ಕೇಳಿದಾಗ ಸ್ಥಳ ಸ್ವಚ್ಛಗೊಳಿಸಲಾಗಿದೆ ಎಂದರು.



ಆಗ ನಾನು ಈ ಗಿಡಗಳನ್ನು ಸಾಲು ಮರದ ತಿಮ್ಮಕ್ಕ ನೆಟ್ಟಿರುವುದು ಸರ್ ಎಂದಾಗ, ಹೌದು ನಾನೇ ಕಿತ್ತಾಕಿರುವುದು, ಏನಾದರು ಮಾಡಿಕೊಳ್ಳಿ ಎಂದು ಉತ್ತರ ನೀಡಿದರು. ಸರ್ಕಾರ ಗಿಡ-ಮರ ಬೆಳೆಸಾಲು ಸಾವಿರಾರು ಕೋಟಿ ರೂ. ಖರ್ಚು ಮಾಡುತ್ತಿದೆ. ಈಗಿನ ಅರಣ್ಯ ಸಚಿವರು ಪರಿಸರ ಸಂರಕ್ಷಣೆಗಾಗಿ ಶ್ರಮಿಸುತ್ತಾ ರಾಜ್ಯವ್ಯಾಪ್ತಿ ತಿರುಗುತ್ತಿದ್ದಾರೆ. ಅರಣ್ಯ ಒತ್ತುವರಿ ತೆರವುಗೊಳಿಸುತ್ತಿದ್ದಾರೆ. ಇತಂಹ ಸಂದರ್ಭದಲ್ಲಿ ಬೆಳೆದ ಗಿಡ ಮರಗಳನ್ನು ಕಿತ್ತುಹಾಕಿರುವುದು ಸರಿಯಲ್ಲ,. ಈ ವಿಷಯವನ್ನು ಶಾಸಕರು ಮತ್ತು ಜಿಲ್ಲಾಧಿಕಾರಿ ಗಮನಕ್ಕೆ ತರಲಾಗಿದ್ದು, ತಹಶೀಲ್ದಾರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಅರಣ್ಯ ಸಚಿವರು, ಉಸ್ತುವಾರಿ ಸಚಿವರು ಹಾಗೂ ಮುಖ್ಯಮಂತ್ರಿಗೆ ದೂರು ನೀಡಲಾಗುವುದು ಎಂದು ತಿಳಿಸಿದರು.

ಪತ್ರಿಕೆಯೊಂದಿಗೆ ತಹಶೀಲ್ದಾರ್ ಶ್ರೀಧರ್ ಕಂಕನವಾಡಿ ಮಾತನಾಡಿ, ತಾಲ್ಲೂಕು ಕಚೇರಿ ಆವರಣದಲ್ಲಿ ಬೇಡವಾದ ಗಿಡಗಂಟಿ ಹುಲುಸಾಗಿ ಬೆಳೆದಿದ್ದವು. ಈ ಜಾಗಕ್ಕೆ ಸಾಕಷ್ಟು ಜನ ಶೌಚಕ್ಕೆ ಹೋಗಿ ವಾಸನೆ ಬರುತ್ತಿರುವ ಬಗ್ಗೆ ಕಚೇರಿ ಅಕ್ಕ-ಪಕ್ಕದ ಮನೆಗಳ ಜನರು ದೂರು ನೀಡಿದ್ದರು. ಹಾಗಾಗಿ ಜಾಗವನ್ನು ಸ್ವಚ್ಛಗೊಳಿಸಿ ಪಾರ್ಕಿಂಗ್ ಹಾಗೂ ಉದ್ಯಾನವನ ನಿರ್ಮಿಸಿ ಜನಗಳು ಕೂರುವ ವ್ಯವಸ್ಥೆ ಮಾಡುವ ಉದ್ದೇಶದಿಂದ ಸ್ವಚ್ಛಗೊಳಿಸಲಾಗಿದೆ. ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಕಂಡ ನೆರಲೆ ಗಿಡಗಳನ್ನು ಬಿಡಲಾಗಿದೆ. ಯಾವುದೇ ಗಿಡ-ಮರಗಳನ್ನು ತೆರವುಗೊಳಿಸಿಲ್ಲ. ಬೇಡವಾದ ಗಿಡ ಗಂಟಿಗಳನ್ನು ಸ್ವಚ್ಛ ಮಾಡಬೇಕು ಎಂದರು.

## ಜನಾರೋಗ್ಯ ಸ್ವಾತಂತ್ರ್ಯಕ್ಕಾಗಿ ಇಂದು ಧರಣಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜನಾರೋಗ್ಯದ ಸ್ವಾತಂತ್ರ್ಯಕ್ಕಾಗಿ ಆ.15 ರಂದು ನಗರದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನೂತನ ಕಟ್ಟಡದ ಆವರಣದಲ್ಲಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಹೆಚ್.ಆರ್.ನವೀನ್ ಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಗರದಲ್ಲಿ ಹಿಮ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಕೂಡಲೇ ಆರಂಭಿಸುವಂತೆ ಹಾಗೂ ಜಿಲ್ಲೆಯ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಭಾರತೀಯ ಸಾರ್ವಜನಿಕ ಆರೋಗ್ಯ ಮಾನದಂಡಗಳಿಗೆ (ಐ.ಪಿ.ಹೆಚ್.ಎಸ್.) ಅನುಗುಣವಾಗಿ ಸೌಲಭ್ಯಗಳನ್ನು ನೀಡಿ ಉನ್ನತೀಕರಿಸಿ ಸಬಲೀಕರಿಸುವಂತೆ ಆಗ್ರಹಿಸಿ ಜಿಲ್ಲಾ ಜನಪರ ಚಳುವಳಿಗಳ ಒಕ್ಕೂಟದ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಆರ್.ಪಿ.ವೆಂಕಟೇಶ್ ಮೂರ್ತಿ, ಟಿ.ಆರ್.ವಿಜಯ್ ಕುಮಾರ್, ಮಮತಾ ಶಿವು, ಚಿನ್ನೇನಹಳ್ಳಿ ಸ್ವಾಮಿ, ಸಮೀರ್ ಅಹಮದ್ ಹಾಜರಿದ್ದರು.

# ಟೈಟಲ್ ಕಾರ್ಡ್‌ನಲ್ಲೇ ಅಭಿಮಾನಿಗಳ ಪೈಸಾ ವಸೂಲಿ




**- ಪ್ರಶಾಂತ್ ಭಟ್**

ತಲೈವರ್ ಸಿನಿಮಾ ಅಂದರೆ ಮೊದಲ ದಿನ ಮೊದಲ ಷೋ ಹೋಗುವುದು ಸಂಪ್ರದಾಯ. ಲೋಕೇಶ್ ಕನಗರಾಜ್ ಸಿನಿಮಾ ಅನ್ನುವ ಬೋನಸ್ ಪಾಯಿಂಟ್ ಬೇರೆ. ಆದರೆ ಅಷ್ಟೆಲ್ಲ ಸ್ಟಾರ್‌ಗಳು, ಅಷ್ಟೇನೂ ಚೆನ್ನಾಗಿಲ್ಲದ ಟ್ರೈಲರ್ ಎಲ್ಲಾ ನಿರಾಸೆ ಹುಟ್ಟಿಸಿತ್ತು. ಆದರೆ ಲೋಕೇಶ್ ಈಸ್ ಕುಕ್ಡ್ ಸಮ್‌ಥಿಂಗ್ ಎಂಬ ಅನುಮಾನ ಇತ್ತು. ಥ್ಯಾಂಕ್ಸ್ ಲೋಕೇಶ್.

ಸ್ಟಾರ್ ನಟರ ಟಿಪಾತ್ರ ಟಿಗಳಾಗಿ ಬಳಸಿದ್ದು. ಹಿನ್ನೆಲೆ ಸಂಗೀತ, ಕತೆ, ಚಿತ್ರಕಥೆ, ಟ್ವಿಸ್ಟುಗಳು. ಎಲ್ಲಕ್ಕಿಂತ ಮೇಲೆ ರಜನಿಯ ಬಳಸಿದ ರೀತಿ..ಎಲ್ಲದರಲ್ಲೂ ಅಭಿಮಾನಿಗಳಿಗೆ ಹಬ್ಬದೂಟ.

ಇದನ್ನು ಅಭಿಮಾನಿಗಳ ಜೊತೆ ಥಿಯೇಟರ್ ಅಲ್ಲಿ ನೋಡುವ ಸಂಭ್ರಮವೇ ಸಂಭ್ರಮ. ನಂಗೆ ಟೈಟಲ್ ಕಾರ್ಡಲ್ಲೇ ಕೊಟ್ಟ ಪೈಸಾ ವಸೂಲ್. ಸೂಚನೆ - ಭಾಯಿ ಬಿರಿಯಾನಿ ಅಂಗಡಿಗೆ ಹೋಗಿ ಮೊಸರನ್ನ ಕೇಳುವ ಚೊರೆಪಾಟ್ ಗಳಿಗಲ್ಲ ಇದು.

ಸೂಚನೆ ಎರಡು - ಪುಣ್ಯಕ್ಕೆ ಟಿಎಟಿ ಸರ್ಟಿಫಿಕೇಟ್ ಕೊಟ್ಟು ವಯಸ್ಕರು ಮಾತ್ರ ಮಕ್ಕಳ ಕರ್ಕೊಂಡು ಬರಬೇಡಿ ಅಂತ ಹೇಳಿದಾರೆ. ಇಲ್ಲವಾದರೆ ನಮ್ಮಲ್ಲಿರೋ ಎಲ್ಲದರಲ್ಲೂ ಕೊಂಕು ಹುಡುಕುವ ವಿಘ್ನ ಸಂತೋಷಿಗಳು ಟಿವಯಲೆನ್ ಜಾಸ್ತಿಟಿ ಎಂದು ಹಾಡುತ್ತಿದ್ದರು.

ಒಂದೇ ಮಾತು - ಲೋಕೇಶ್ ಕನಗರಾಜ್ ಸಿನಿಮಾದಲ್ಲಿ ರಜನಿಕಾಂತ್ ಪಾತ್ರ ಮಾಡಿದ್ದಾರೆ. ಮತ್ತು ರಜನಿಕಾಂತ್ ಆಗಿ ಮಾಡಿದ್ದಾರೆ. ಹೋಗಿ ಗಮ್ಮತ್ ಮಾಡಿ.

ಎಪ್ಪತ್ತೈದು ವರ್ಷದ ಸೂಪರ್ ಸ್ಟಾರ್ ತಾನು ಯಾಕೆ ಐವತ್ತು ವರ್ಷದಿಂದ ಸೂಪರ್ ಸ್ಟಾರ್ ಎಂದು ತೋರಿಸಿದ್ದಾರೆ ಅದಕ್ಕಾಗಿ ನೋಡಿ. ರೇಟಿಂಗ್ - ತಲೈವರ್ ಸಿನಿಮಾಗೆಲ್ಲ ರೇಟಿಂಗ್ ಇಲ್ಲ. ಫುಲ್ ಮೀಲ್ಸ್.

# 78ನೇ ಸ್ವಾತಂತ್ರ್ಯ ದಿನಾಚರಣೆ: ಭಾರತದ ಗರ್ವದ ಕ್ಷಣ




**ವಿಶ್ವಾಸ್ ಡಿ. ಗೌಡ, ಸಕಲೇಶಪುರ**

ಪ್ರತಿವರ್ಷ ಆಗಸ್ಟ್ 15ರಂದು ಭಾರತವು ತನ್ನ ಸ್ವಾತಂತ್ರ್ಯವನ್ನು ಸಂಭ್ರಮದಿಂದ ಆಚರಿಸುತ್ತದೆ. ಈ ಬಾರಿ 2025ರಲ್ಲಿ ನಾವು 78ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸುತ್ತಿದ್ದೇವೆ. 1947ರ ಆಗಸ್ಟ್ 15ರಂದು ಬ್ರಿಟಿಷರ 200ಕ್ಕೂ ಹೆಚ್ಚು ವರ್ಷದ ಆಳ್ವಿಕೆಗೆ ಅಂತ್ಯವಿಟ್ಟು ಭಾರತವು ಸ್ವತಂತ್ರ ರಾಷ್ಟ್ರವಾಯಿತು. ಆ ದಿನದ ಬೆಳಗಿನಿಂದಲೇ ನಮ್ಮ ರಾಷ್ಟ್ರವು ಹೊಸ ಉದಯವನ್ನು ಕಂಡಿತು. ಸ್ವಾಭಿಮಾನ, ಸ್ವಯಂ ನಿರ್ಣಯ ಮತ್ತು ಜನತಾಂತ್ರಿಕ ಬದುಕಿನ ಪ್ರಾರಂಭ.

ಇತಿಹಾಸದ ನೆನಪು: ಸ್ವಾತಂತ್ರ್ಯದ ಹಾದಿ ಸುಲಭವಾಗಿರಲಿಲ್ಲ. 1857ರ ಮೊದಲ ಸ್ವಾತಂತ್ರ್ಯ ಸಮರದಿಂದ ಆರಂಭವಾಗಿ ಅನೇಕ ಹೋರಾಟಗಾರರ ತ್ಯಾಗ, ಜೈಲು ಜೀವನ, ಅಹಿಂಸಾ ಸತ್ಯಾಗ್ರಹ, ಕ್ರಾಂತಿಕಾರರ ಶೌರ್ಯ ಇವೆಲ್ಲವೂ ಈ ದಿನದ ಆಧಾರ ಕಲ್ಲುಗಳಾಗಿವೆ. ಮಹಾತ್ಮ ಗಾಂಧೀಜಿಯ ಅಹಿಂಸಾ ಮಾರ್ಗ, ನೆಹರೂ, ಪಟೇಲ್, ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್ ಹಾಗೂ ಅನೇಕ ಗಣ್ಯರು ನೀಡಿದ ಶ್ರಮವು ಇಂದಿನ ಸ್ವತಂತ್ರ ಭಾರತದ ಮೂಲ ಕಾರಣ.

### ಇಂದಿನ ಆಚರಣೆ

ಸ್ವಾತಂತ್ರ್ಯ ದಿನದಂದು, ದೇಶದಾದ್ಯಂತ ಶಾಲೆ-ಕಾಲೇಜುಗಳು, ಸರ್ಕಾರಿ ಕಚೇರಿಗಳು, ಸಾರ್ವಜನಿಕ ಸ್ಥಳಗಳಲ್ಲಿ ಧ್ವಜಾರೋಹಣ ನಡೆಯುತ್ತದೆ. ದೆಹಲಿಯ ಕೆಂಪುಕೋಟೆಯಲ್ಲಿ ಪ್ರಧಾನಮಂತ್ರಿ ರಾಷ್ಟ್ರಧ್ವಜ ಹಾರಿಸಿ, ದೇಶದ ಜನತೆಗೆ ಸಂದೇಶ ನೀಡುತ್ತಾರೆ. ಪಥಸಂಚಲನ, ದೇಶಭಕ್ತಿಗೀತೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದ್ಯಾರ್ಥಿಗಳ ಭಾಷಣಗಳು ಇವೆಲ್ಲವೂ ದೇಶಪ್ರೇಮವನ್ನು ಮತ್ತಷ್ಟು ಗಾಢಗೊಳಿಸುತ್ತವೆ.

### ಇಂದಿನ ಪೀಳಿಗೆಗೆ ಸ್ವಾತಂತ್ರ್ಯದ ಅರ್ಥ

ಸ್ವಾತಂತ್ರ್ಯ ಎಂದರೆ ಕೇವಲ ರಾಜಕೀಯ ಮುಕ್ತಿಯಲ್ಲ. ಅದು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ವೈಯಕ್ತಿಕ ಸ್ವಾತಂತ್ರ್ಯವನ್ನು ಒಳಗೊಂಡಿದೆ. ಇಂದಿನ ಯುವ ಪೀಳಿಗೆಗೆ, ಇದು ಜವಾಬ್ದಾರಿಯ ಸಂಕೇತ. ಭ್ರಷ್ಟಾಚಾರ, ಅಸಮಾನತೆ, ಅಜ್ಞಾನ, ಪರಿಸರ ಹಾನಿ ಮುಂತಾದ ಸಮಸ್ಯೆಗಳನ್ನು ನಿವಾರಿಸಿ ರಾಷ್ಟ್ರದ ಅಭಿವೃದ್ಧಿಗೆ ತಮ್ಮ ಕೊಡುಗೆಯನ್ನು ನೀಡುವ ಹೊಣೆ.

### ಪ್ರೇರಣಾದಾಯಕ ಸಂದೇಶ

ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದು ಅದನ್ನು ಗೆಲ್ಲುವಷ್ಟೇ ಮುಖ್ಯ. ಶೌರ್ಯ, ಶ್ರಮ, ಸತ್ಯ, ಅಹಿಂಸಾ ಮತ್ತು ಏಕತೆಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಿಜವಾದ ಸ್ವಾತಂತ್ರ್ಯ ಅನುಭವಿಸಬಹುದು. ಈ 78ನೇ ಸ್ವಾತಂತ್ರ್ಯ ದಿನಾಚರಣೆಯಂದು ನಾವೆಲ್ಲರೂ ಟಿರಾಷ್ಟ್ರ ಮೊದಲ, ನಾನು ನಂತರಟಿಎಂಬ ಮನೋಭಾವದೊಂದಿಗೆ ಕಾರ್ಯನಿರ್ವಹಿಸೋಣ.

ಜೈ ಹಿಂದುಸ್ತಾನ್ ವಂದೇ ಮಾತರಂ

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-15

**1947:** ಭಾರತವು ಬ್ರಿಟಿಷರ ಆಳ್ವಿಕೆಯಿಂದ ಮುಕ್ತವಾಗಿ ಸ್ವತಂತ್ರ ರಾಷ್ಟ್ರವಾಯಿತು. ಇದೇ ದಿನ ಜವಾಹರಲಾಲ್ ನೆಹರು ಅವರು ಭಾರತದ ಮೊದಲ ಪ್ರಧಾನ ಮಂತ್ರಿಯಾದರು.

**1947:** ಪಾಕಿಸ್ತಾನವೂ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದುಕೊಂಡಿತು.

**1945:** ಜಪಾನ್ ವಿಶ್ವಯುದ್ಧದಲ್ಲಿ ಮಿತ್ರ ರಾಷ್ಟ್ರಗಳಿಗೆ ಶರಣಾಯಿತು. ಅದರಿಂದ ದ್ವಿತೀಯ ವಿಶ್ವಯುದ್ಧ ಅಧಿಕೃತವಾಗಿ ಅಂತ್ಯಗೊಂಡಿತು.

**1960:** ಕಾಂಗೋ ಗಣರಾಜ್ಯದಲ್ಲಿ ಕ್ಯಾಟಾಂಗಾ ಪ್ರಾಂತ್ಯದ ವಿಭಜನೆಯ ಘೋಷಣೆ.

**1962:** ಬ್ರಿಟನ್‌ಗೆ ಸೇರಿದ ಸೈಪ್ರಸ್ ಸ್ವಾತಂತ್ರ್ಯ ಪಡೆದಿತು.

**1971:** ಬಹರೈನ್ ಯುಕೆ ಆಳ್ವಿಕೆಯಿಂದ ಮುಕ್ತವಾಗಿ ಸ್ವತಂತ್ರ ರಾಷ್ಟ್ರವಾಯಿತು.

**1975:** ಬಾಂಗ್ಲಾದೇಶದ ಮೊದಲ ಅಧ್ಯಕ್ಷ ಶೇಖ್ ಮುಜೀಬುರ್ ರಹಮಾನ್ ಅವರನ್ನು ಹತ್ಯೆ ಮಾಡಲಾಯಿತು.

**2013:** ಈಜಿಪ್ಟ್‌ನಲ್ಲಿ ಸೇನಾ ಸರ್ಕಾರದ ವಿರುದ್ಧ ಪ್ರತಿಭಟನೆ ವೇಳೆ ನೂರಾರು ಜನರು ಸಾವಿಗೀಡಾದರು.

### ಜನನ

**1769:** ನೆಪೋಲಿಯನ್ ಬೊನಪಾರ್ಟ್, ಫ್ರೆಂಚ್ ಸೇನಾ ನಾಯಕ ಮತ್ತು ಚಕ್ರವರ್ತಿ.

**1872:** ಶ್ರೀ ಅರವಿಂದೊ, ಭಾರತೀಯ ತತ್ವಜ್ಞ, ಕವಿ, ಸ್ವಾತಂತ್ರ್ಯ ಹೋರಾಟಗಾರ.

**1926:** ವೆರ್ಸೆ ಚಂದ್ರಶೇಖರ್, ಭಾರತೀಯ ವಿಜ್ಞಾನಿ.

### ಮರಣ

**1936:** ಗ್ರಾಜಿನಾ ಬಿಯುಟ್ರೇ, ಲಿಥುವೇನಿಯನ್ ಕವಯತ್ರಿ.

**1975:** ಶೇಖ್ ಮುಜೀಬುರ್ ರಹಮಾನ್, ಬಾಂಗ್ಲಾದೇಶದ ಸಂಸ್ಥಾಪಕ.

# ಧರ್ಮಸ್ಥಳ ಕ್ಷೇತ್ರ ತೇಜೋವಧೆ ಸಲ್ಲದು: ಎಂ.ಎ. ಗೋಪಾಲಸ್ವಾಮಿ

ಚನ್ನರಾಯಪಟ್ಟಣ: ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಮತ್ತು ಕ್ಷೇತ್ರದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ತೇಜೋವಧೆ ನಡೆಯುತ್ತಿದ್ದು ಅದಕ್ಕೆ ಕಡಿವಾಣ ಹಾಕಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಆಗ್ರಹಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅನಾಮಿಕ ನೂರಾರು ಶವಗಳನ್ನ ಹೂತಿದ್ದೇನೆ. ಇವೆಲ್ಲವೂ ಸ್ವಾಭಾವಿಕ ಸಾವುಗಳಲ್ಲ ಎಂದು ಆರೋಪಿಸಿದ ಹಿನ್ನೆಲೆಯಲ್ಲಿ ಸರ್ಕಾರ ಎಸ್‌ಐಟಿ ತನಿಖೆಗೆ ಆದೇಶಿಸಿದೆ. ತನಿಖೆ ಮುಂದುವರೆದಿರುವಾಗಲೇ ಕೆಲ ಮಾಧ್ಯಮಾಗಳಲ್ಲಿ ಕ್ಷೇತ್ರ ಮತ್ತು ಧರ್ಮಾಧಿಕಾರಿ ವೀರೆಂದ್ರ ಹೆಗ್ಗಡೆ ವಿರುದ್ಧ ಅಪಪ್ರಚಾರಗಳ ಮೂಲಕ ತೇಜೋವಧೆ ಮಾಡುವ ಕೆಲಸವಾಗುತ್ತಿದೆ. ಇದು ಸರಿಯಲ್ಲ ಎಂದರು.

ಈಗಾಗಲೇ ಎಸ್‌ಐಟಿ ತನಿಖೆ ಅನಾಮಿಕ ಸೂಚಿಸಿದ ಎಲ್ಲ ಜಾಗಗಳನ್ನು ಅಗೆದಿದೆ. ಯಾವ ಜಾಗದಲ್ಲೂ ಅಸ್ಥಿಪಂಜರಗಳ ಗೋಚರವಿಲ್ಲ, ಅದರಿಂದ ಈಗಾಗಲೇ ಜನಸಾಮಾನ್ಯರಿಗೆ ಅನಾಮಿಕ ಆರೋಪ ಸತ್ಯಕ್ಕೆ ದೂರವಾದದ್ದು ಎಂಬ ನಂಬಿಕೆ ಬರತೊಡಗಿದೆ. ಜನರು ಇಟ್ಟಿರುವ ನಂಬಿಕೆಯನ್ನು ಕೆಡಿಸುವ ಕೆಲಸ ಕೆಲವರಿಂದಾಗುತ್ತಿದೆ ಎಂದರು.

ಈ ಷಡ್ಯಂತ್ರ ಖಂಡಿಸಿ ಆಗಸ್ಟ್ 23ರ ಶನಿವಾರ ಪಟ್ಟಣದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಧರ್ಮಸ್ಥಳ ಕ್ಷೇತ್ರಕ್ಕೆ ಭೇಟಿ ನೀಡಿ ಮಂಜುನಾಥನ ದರ್ಶನ ಪಡೆದು ವೀರೆಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿ ಆತ್ಮಸ್ಥೈರ್ಯ ತುಂಬುತ್ತೇವೆ ಎಂದರು.

ಮುಖಂಡರಾದ ಎಂ.ಕೆ. ಮಂಜೇಗೌಡ, ಅಣತಿ ಆನಂದ್ ಕುಮಾರ್, ಟೆಂಟ್ ಪ್ರಕಾಶ್, ಪ್ರೇಮ್ ಕುಮಾರ್, ಉಮಾಶಂಕರ್ ಇದ್ದರು.

# ಹಳೆಯ ದ್ವೇಷ: ದೊಣ್ಣೆಯಿಂದ ಮನಬಂದಂತೆ ಥಳಿತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಹಳೆಯ ದ್ವೇಷದಿಂದ ಕುಡಿದ ಮತ್ತಿನಲ್ಲಿ ಮೂವರು ಸೇರಿ ವ್ಯಕ್ತಿಯೊಬ್ಬನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಹಂಡ್ರಂಗಿ ಗ್ರಾಮದಲ್ಲಿ ನಡೆದಿದೆ.




ಗ್ರಾಮದ ಸಂತೋಷ್ ವೈನ್ಸ್ ಎದುರೇ ನಂದೀಶ್ ಎಂಬಾತನ ಮೇಲೆ ಹಲ್ಲೆ ನಡೆಸಿದ್ದಾರೆ. ದೊಣ್ಣೆಯಿಂದ ಮನಬಂದಂತೆ ಥಳಿಸಿರುವ ದೃಶ್ಯಾವಳಿ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಹಂಡ್ರಂಗಿಯ ಮಂಜುನಾಥ್, ಅಬ್ಬೂರು ಗ್ರಾಮದ ಸುನೀಲ್ ಮತ್ತು ಕೆರೆಕೋಡಿಯ ಮನು ಎಂಬುವರು ಹೊಡೆದಿದ್ದಾರೆ.

ಆ. 10ರಂದು ಈ ಘಟನೆ ನಡೆದಿದೆ. ಏಟು ತಾಳಲಾರದೆ ನಂದೀಶ್ ಸ್ಥಳದಲ್ಲೇ ಕುಸಿದು ಬಿದ್ದರೂ ಮನಸೋಯಿಚ್ಛೆ ಥಳಿಸಿದ್ದಾರೆ. ನಂದೀಶ್ ಅವರ ದೇಹದಿಂದ ರಕ್ತ ಹರಿದರೂ ಬಿಡದೆ ಹಲ್ಲೆ ಮಾಡಿದ್ದಾರೆ. ಹೊಡೆದಾಟದ ಸಂದರ್ಭದಲ್ಲಿ ಸಾಕಷ್ಟು ಜನ ಜಮಾಯಿಸಿದ್ದರೂ ಜಗಳ ಬಿಡಿಸಲು ಯಾರೂ ಮುಂದಾಗುವುದಿಲ್ಲ. ವ್ಯಕ್ತಿಯೊಬ್ಬರು ನೀಡಿದ ಮಾಹಿತಿ ಆಧರಿಸಿ ಸ್ಥಳಕ್ಕೆ ದೌಡಾಯಿಸಿದ ಕೊಣನೂರು ಪೊಲೀಸರು ಮೂವರನ್ನು ಬಂಧಿಸಿ ಗಾಯಾಳು ನಂದೀಶ್‌ನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248